ದಿನಾಂಕಃ 06.02.2025

ಅಸಲು ದಾವಃ 97/2020

ಪಿ.ಡಬ್ಲ್ಯೂ 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ದಾವ ಐಟಂ ನಂ. 6 ರ ವಿಸ್ತೀರ್ಣ ಎಷ್ಟು ಎಂದು ಹೇಳಲಾಗುವುದ ಎಂದರೆ ಸಾಕ್ಷಿ ಆಗುವುದಿಲ್ಲ ದಾಖಲಾತಿಗಳನ್ನು ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಯಾವ ದಾಖಲಾತಿ ಹಾಜರು ಪಡಿಸಿದ್ದೀರಿ ಎಂದರೆ ಸಾಕ್ಷಿ ದಾಖಲಾತಿಗಳನ್ನು ಪರಿಶೀಲಿಸಿ ನೋಡಿ ಗೊತ್ತಾಗುತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ದಾವ ಐಟಂ ನಂ.6 ಕ್ಕೆ ಸಂಬಂದಿಸಿದಂತೆ ಹಾಜರು ಪಡಿಸಿರುವ ನಿಪಿ7 ರಲ್ಲಿ ನಮೂದಿಸಿರುವ ಸಂಪೂರ್ಣ ವಿಸ್ತೀರ್ಣ ಪ್ರತಿವಾದಿಯರ ಕುಟುಂಬಕ್ಕೆ ಸೇರಿದ್ದಲ ಎಂದರೆ ಸಾಕ್ಷಿ ಸೇರಿರುವುದರಿಂದಲೆ ಹಾಜರು ಪಡಿಸಿರುವುದು ಎಂದು ಉತ್ತರಿಸುತ್ತಾರೆ. ದಾವ ಐಟಂ ನಂ. 6 ನೇ ಸ್ವತ್ತಿನಲ್ಲಿ ಅರ್ಧ ಭಾಗ ಅಂದರೆ 22 1/2 * 60 ಅಡಿಗಳು ಸಿದ್ದೇಗೌಡರಿಗೆ ಮಾರಾಟ ಮಾಡಲು ಕರಾರು ಆಗಿತ್ತು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಮೇಲೆ ಹೇಳಿದ ಐಟಂ ನಂ.6 ರ ಅರ್ಧ ಭಾಗ ಮಾರ್ಚ್ 2019 ರಲ್ಲಿ ಸಿದ್ದೇಗೌಡರ ಮಗ ಚೇತನ್ ಅವರಿಗೆ ಕ್ರಯ ಪತ್ರ ಆಗಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಸ್ವತ್ತನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಪುನಿತ್ ಅವರ ಅನಾರೋಗ್ಯದ ನಿಮಿತ್ತ ಚಿಕಿತ್ಸೆಗಾಗಿ ಮಾಡಲಾಗಿದ್ದ ರೂ.43 ಲಕ್ಷ ಸಾಲದ ಪೈಕೆ ರೂ.7 ಲಕ್ಷಗಳನ್ನು ತೀರಿಸಿ ಈಗಲೂ ಬಾಕಿ ರೂ.36 ಲಕ್ಷ ಉಳಿದಿರುತ್ತದೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಈಗ ಐಟಂ ನಂ. 6 ರ ಸ್ವತ್ತು ಚೇತನ್ ಅವರಿಗೆ ಕ್ರಯವಾದ ನಂತರ ಅವರ ಹೆಸರಿನಲ್ಲಿ ಮ್ಯುಟೇಷನ್ ಆಗಿ ಅವರ ಹೆಸರಿನಲ್ಲಿ ಆ ಸ್ವತ್ತು ಬರುತ್ತಿದೆ ಎಂದರೆ ಸಾಕ್ಷಿ ನಾನು ಯಾವುದೇ ಸಹಿ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಚೇತನ್ ಅವರು ದಾವ ಐಟಂ ನಂ.6 ನೇ ಸ್ವತ್ತಿನಲ್ಲಿ ಅರ್ಧ ಭಾಗ ಖರೀದಿಸಿರುವುದರಿಂದ ಅವರೂ ಸಹ ಈ ದಾವೆಯ ಪಕ್ಷಗಾರರಾಗುತ್ತಾರೆ ಎಂದರೆ ಸಾಕ್ಷಿ ಇಲ್ಲ ನನ್ನ ಗಂಡನಿಗೆ ಸಂಬಂಧಪಟ್ಟ ಭಾಗವನ್ನು ಮಾತ್ರ ಕೇಳುತ್ತಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ಗಂಡನ ಚಿಕಿತ್ಸೆಗಾಗಿ ಚೇತನ್ ಅವರಿಗೆ ಐಟಂ ನಂ.6 ರಲ್ಲಿ ಅರ್ಧ ಭಾಗ ಮಾರಾಟ ಮಾಡಿರುವ ವಿಚಾರ ನಿಮಗೆ

ಗೊತ್ತಿದ್ದರೂ ಸಹ ಅವರ ಆಸ್ತಿಯನ್ನು ಲಪಟಾಯಿಸಬೇಕು ಎಂಬ ಉದ್ದೇಶದಿಂದ ಪೂರ್ತಿ ಸ್ವತ್ತಿಗೆ ಸಂಬಂಧಿಸಿದಂತೆ ದಾವೆ ಹಾಕಿದ್ದೀರ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಕುಟುಂಬದ ಅವಶ್ಯಕತೆಗೋಸ್ಕರ ದಾವ ಐಟಂ ನಂ.6 ರಲ್ಲಿ ಅರ್ಧ ಭಾಗವನ್ನು ಚೇತನ್ ಅವರಿಗೆ ಮಾರಿರುವುದರಿಂದ ಆ ಅರ್ಧ ಭಾಗದಲ್ಲಿ ನಿಮಗಾಗಲಿ ಹಾಗು ಪ್ರತಿವಾದಿಯರಿಗಾಗಲಿ ಯಾವುದೆ ರೀತಿಯ ಹಕ್ಕು ಇಲ್ಲ ಎಂದರೆ ಸಾಕ್ಷಿ ನನ್ನ ಮದುವೆಯಾದ ನಂತರ ಮಾರಿದ್ದಾರೆ ನಾನು ಸಹಿ ಮಾಡಿಲ್ಲ ಹಕ್ಕಿದೆ ಎಂದು ಉತ್ತರಿಸುತ್ತಾರೆ. ದಾವ ಐಟಂ ನಂ. 6 ರ ಪ್ರಸ್ತುತ ಪಂಚಾಯಿತಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಏನು ಇರುವುದಿಲ್ಲ. ದಾವ ಐಟಂ ನಂ. 6 ರ ಪ್ರಸ್ತುತ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ದಾವ ಐಟಂ ನಂ.6 ರಲ್ಲಿ ಈಗಾಗಲೆ ಅರ್ಧ ಭಾಗ ಮಾರಾಟವಾಗಿರುವುದರಿಂದ, ಆ ಬಾಬ್ತು ಪ್ರಸ್ತುತ ದಾಖಲಾತಿಗಳನ್ನು ಹಾಜರು ಪಡಿಸಿಲ್ಲದೇ ಇರುವುದರಿಂದ, ದಾವ ಶೆಡ್ಯೂಲ್ ನಲ್ಲಿ ನಮೂದಿಸಿರುವ ದಾವ ಐಟಂ ನಂ.6 ರ ವಿಸ್ತೀರ್ಣ ಹಾಗೂ ಚೆಕ್ಕುಬಂದಿ ತಪ್ಪಾಗಿರುವುದರಿಂದ ಆ ಸ್ವತ್ತಿಗೆ ಸಂಬಂಧಿಸಿದಂತೆ ಈ ದಾವೆ ವಜಾ ಆಗಲು ಅರ್ಹವಾಗಿದೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸರಿಯಾದ ಚೆಕ್ಕುಬಂದಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸರಿಯಾದ ಚೆಕ್ಕುಬಂದಿ ಕೊಡದೆ ದಾವ ಹಾಕಿರುವುದರಿಂದ 3 ನೇ ವ್ಯಕ್ತಿಯ ಹಕ್ಕಿಗೆ ಚುತಿಯಾಗುತ್ತಿದೆ ಎಂದರೆ ಸರಿಯಲ್ಲ ಎಂದು ಉತ್ತರಿಸುತ್ತಾರೆ.

2. ನಮ್ಮ ಯಜಮಾನರು ಶುಗರ್ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುವುದಕ್ಕಿಂತ ಮುಂಚೆ ಸ್ವಂತ ಮೊಬೈಲ್ ಅಂಗಡಿ ಹಾಕಿಕೊಟ್ಟಿದರು ಎಂದರೆ ಸಾಕ್ಷಿ ಮೊಬೈಲ್ ಅಂಗಡಿ ಇದೆ ಎಂದು ಹೇಳಿದ್ದರು ಎಂದು ಉತ್ತರಿಸುತ್ತಾರೆ. ಕುಟುಂಬದವರು ಕುಟುಂಬದ ಆಧಾಯದಿಂದ ಮೊಬೈಲ್ ಅಂಗಡಿ ಹಾಕಿಕೊಟ್ಟಿದ್ದರೂ ಅದನ್ನು ಸರಿಯಾಗಿ ನಡೆಸದೆ ರೂ.4 ಲಕ್ಷ ಸಾಲವನ್ನು ಹೊರಿಸಿ ಕೊನೆಗೆ ಅಂಗಡಿಯನ್ನು ಮುಚ್ಚಿ ನಂತರ ಶುಗರ್ ಫ್ಯಾಕ್ಟರಿಗೆ ಕೆಲಸಕ್ಕೆ ಹೋದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

3. ನೀವು ನಿಮ್ಮ ಯಜಮಾನರನ್ನು ಸರಿಯಾಗಿ ನೋಡಿಕೊಳ್ಳದೆ ನಿರ್ಲಕ್ಷ್ಯಮಾಡಿದ್ದರಿಂದ 1 ಮತ್ತು 2 ನೇ ಪ್ರತಿವಾದಿಯರು ನಿಮ್ಮ ಯಜಮಾನರನ್ನು

ಮಂಡ್ಯದ ಪ್ರಶಾಂತ್ ನರಸಿಂಗ್ ಹೋಂ, ವೈದ್ಯರಾದ ಮಂಜುನಾಥ ಫಿಸೀಶಿಯನ್ ರವರಿಗೆ ತೋರಿಸಿದ್ದು 2 ಸಾರಿ ಅದೇ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ ಆ ನಂತರ ಬೆಂಗಳೂರಿನ ಸ್ಪಂದನ ನರಸಿಂಗ್ ಹೊಂ ನಲ್ಲಿ ಮಾನಸಿಕ ಖಿನ್ನತೆ ಹಾಗು ಜಾಂಡೀಸ್ ಖಾಯಿಲೆಗೆ ಚಿಕಿತ್ಸೆ ಕೊಡಿಸಿದ್ದಾರೆ ಎಂದರೆ ಸಾಕ್ಷಿ ನಾನು ಇದ್ದೆ ಎಂದು ಉತ್ತರಿಸುತ್ತಾರೆ. ನಂತರ ಜಾಂಡೀಸ್ ಖಾಯಿಲೆ ಮೀರಿ ಹೋಗಿದ್ದ ಕಾರಣ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ ಎಂದರೆ ಸಾಕ್ಷಿ ಹೌದು ಚಿಕಿತ್ಸೆ ಕೊಡಿಸಿದ್ದೇವೆ  ಎಂದು ಉತ್ತರಿಸುತ್ತಾರೆ. ನಂತರ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಯ ವೈದ್ಯರ ಸಲಹೆಯ ಮೇರೆಗೆ ಬೆಂಗಳೂರಿನ ಬಿ.ಜಿ.ಎಸ್. ಗ್ಲೋಬಲ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಡಾ.ಬಾನುಕುಮಾರ್ ಚಿಕಿತ್ಸೆ ನೀಡಿರುತ್ತಾರೆ. ಬೆಂಗಳೂರಿನ ಬಿ.ಜಿ.ಎಸ್. ಗ್ಲೋಬಲ್ ಆಸ್ಪತ್ರೆಯಲ್ಲಿ ಡಾ.ರಾಘವೇಂದ್ರ ಚಿಕಿತ್ಸೆ ನೀಡಿರುತ್ತಾರೆ.  ಪುನಿತ್ ಅವರು ಯಾವ ಆಸ್ಪತ್ರೆಯಲ್ಲಿ ತೀರಿಕೊಂಡರು ಎಂದು ಹೇಳಬಹುದ ಎಂದರೆ ಸಾಕ್ಷಿ  ದುಡ್ಡಿಲ್ಲವೆಂಬ ಕಾರಣಕ್ಕೆ ಬೆಂಗಳೂರಿನ ಒಂದು ಆಸ್ಪತ್ರೆಯಲ್ಲಿ  ದಾಖಲಿಸಿದೆವು ಅಲ್ಲಿ ತೀರಿಕೊಂಡಿರುತ್ತಾರೆ ಆ ಆಸ್ಪತ್ರೆಯ ಹೆಸರು ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಪುನಿತ್ನ ಅವಅರಿಗೆ ಯಾವ ಯಾವ ಆಸ್ಪತ್ರೆಗಳಲಿಲ ಚಿಕಿತ್ಸೆ ಕೊಡಿಸಲಾಗಿದೆ ಎಂಬುದು ಮತ್ತು ಎಷ್ಟು ಖರ್ಚಾಗಿದೆ ಎಂಬುದು ನಿಮಗೆ ಗೊತ್ತಿಲ್ಲ  ಹಾಗೆಯೇ ಅವರು ಇಲ್ಲಿ ಕೊನೆಯುಸಿರೆಳೆದರು ಎಂಬುದು ನೀಮಗೆ ಗೊತ್ತಿಲ್ಲ ಆದರೂ ಚಿಕಿತ್ಸೆ ಸಮಯದಲ್ಲಿ ಎಲ್ಲಾ ನಾನು ಇದ್ದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಅವರ ಅನಾರೋಗ್ಯದ ಸಂಬಂಧ ನಾನು 1 ರೂಪಾಯಿಯು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಪುನಿತ್ ಅವರ ಲಿವರ್ **transplantation** ಗೆ ಸಲಹೆ ಕೊಟ್ಟ ವೈದ್ಯರ ಹೆಸರು ಡಾ.ರಾಘವೇಂದ್ರ, ಬಿ.ಜಿ.ಎಸ್. ಗ್ಲೋಬಲ್ ಆಸ್ಪತ್ರೆ, ಬೆಂಗಳೂರು.  ನೀವು ಅವರಿಗೆ ನಿಮ್ಮ ಲಿವರ್ ಕೊಡಬಹುದು ಎಂದು ವೈದ್ಯರು ಹೇಳಿದ್ದರ ಎಂದರೆ ಸಾಕ್ಷಿ ಇಲ್ಲ ನಮ್ಮಿಬ್ಬರ ರಕ್ತದ ಗುಂಪು ಬೇರೆ ಬೇರೆ ಹಾಗಾಗಿ ಮ್ಯಾಚ್ ಆಗುವುದಿಲ್ಲ ಎಂದು ಉತ್ತರಿಸುತ್ತಾರೆ.  ನನ್ನ ರಕ್ತದ ಗುಂಪು **B+**.  ನಿಮ್ಮಿಬ್ಬರ ರಕ್ತದ ಗುಂಪು ಒಂದೆ ಆದರೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.  ನಿಮ್ಮ ರಕ್ತದ ಗುಂಪು ಮ್ಯಾಚ್ ಆದರೂ ಸಹ ನನಗೆ ಗಂಡನ ಅವಶ್ಯಕತೆ ಇಲ್ಲ ನಾನು ಲಿವರ್ ಕೊಡುವುದಿಲ್ಲ ಎಂದು ಹೇಳಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು

ಉತ್ತರಿಸುತ್ತಾರೆ. ಅವರ ತಂದ ತಮ್ಮ ಲಿವರ್ ಕೊಡುವುದಾಗಿ ಹೇಳಿದ್ದು ಆಗ ವೈದ್ಯರು 60 ವರ್ಷ ವಯಸ್ಸಾಗಿರುವುದರಿಂದೆ ಬೇಡ ಎಂದು ಹೇಳಿದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅವರ ತಾಯಿ ಕೂಡ ಲಿವರ್ ಕೊಡಲು ಮುಂದಾದಾಗ ಅವರ ಲಿವರ್ ಗೆಡ್ಡೆ ಬೆಳೆದಿರುವುದರಿಂದ ಬೇಡ ಎಂದು ವೈದ್ಯರು ಹೇಳಿದರು ಎಂದರೆ ಸಾಕ್ಷಿ ಆ ರೀತಿ ಸುಳ್ಳು ರಿಪೋರ್ಟ್ ಸೃಷ್ಟಿ ಮಾಡಿದರು, ಅವರಿಗೆ ನನ್ನ ಮದುವೆಯ ಪೂರ್ವದಲ್ಲಿಯೇ ಗರ್ಭಕೋಶ ಶಸ್ತ್ರ ಚಿಕಿತ್ಸೆ ಆಗಿದೆ ಎಂದು ಉತ್ತರಿಸುತ್ತಾರೆ. ಆಗ 2 ನೇ ಪ್ರತಿವಾದಿ ಲಿವರ್ ಕೊಡಲು ಮುಂದಾದಾಗ ಕುಟುಂಬದವರೆಲ್ಲರೂ ಇಬ್ಬರು ಅತಂತ್ರ ಸ್ಥಿತಿಗೆ ಒಳಗಾಗುತ್ತೀರಿ ಎಂದು ಬಿಡಲಿಲ್ಲ ಎಂದರೆ ಸಾಕ್ಷಿ ಅವರೇ ಕೊಡುವುದಿಲ್ಲ ಎಂದು ಹೇಳಿದರು ಎಂದು ಉತ್ತರಿಸುತ್ತಾರೆ. ನಾನು ಮೇಲಿನ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂತಿಮವಾಗಿ ಪುನಿತ್ ಅವರ ಲಿವರ್ **transplant** ಚಿಕಿತ್ಸೆಗಾಗಿ ಬೆಂಗಳೂರು, ಮಂಗಳೂರು, ಚೆನ್ನೈ ಆಸ್ಪತ್ರೆಗಳಲ್ಲಿ ಬುಕ್ಕಿಂಗ್ ಮಾಡಿದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಯಾವ ವೈದ್ಯರು ಸಲಹೆ ಮಾಡಿದ್ದರು ಮತ್ತು ಬುಕ್ಕಿಂಗ್ ಮಾಡಿರುವ ಬಗ್ಗೆ ದಾಖಲೆಗಳು ಇವೆಯ ಎಂದರೆ ಸಾಕ್ಷಿ ಡಾ.ರಾಘವೇಂದ್ರ ಸಲಹೆ ಮಾಡಿದ್ದರು ಬುಕ್ಕಿಂಗ್ ಮಾಡಿದ್ದ ಬಗ್ಗೆ ದಾಖಲೆಗಳು ಇಲ್ಲ ಎಂದು ಉತ್ತರಿಸುತ್ತಾರೆ. ಆ ರೀತಿ ಬುಕ್ಕಿಂಗ್ ಮಾಡಿದ್ದರಿಂದ ಏನಾದರೂ ಫಲ ಸಿಕ್ಕಿತ್ತ ಎಂದರೆ ಸಾಕ್ಷಿ ಪುನಿತ್ ಅವರು ತೀರಿಕೊಂಡ 2 ದಿನಗಳ ನಂತರ ಲಿವರ್ ಸಿಕ್ಕಿದೆ ಎಂದು ಫೋನ್ ಬಂದಿರುತ್ತದೆ ಎಂದು ಉತ್ತರಿಸುತ್ತಾರೆ. ಪುನಿತ್ ಅವರನ್ನು ಕೊನೆಯ ಭಾರಿಗೆ ಯಾವ ಆಸ್ಪತ್ರೆ ಎಂದರೆ ಸಾಕ್ಷಿ ಆಸ್ಪತ್ರೆ ಹೆಸರು ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಕೊನೆಯದಾಗಿ ತೋರಿಸಿದ ಆಸ್ಪತ್ರೆಯಲ್ಲಿ ಪುನಿತ್ ಅವರು ಎಷ್ಟು ದಿನ ದಾಖಲಾಗಿದ್ದರು ಎಂದರೆ ಸಾಕ್ಷಿ 15 ದಿನ ಎಂದು ಉತ್ತರಿಸುತ್ತಾರೆ. ಆ ಆಸ್ಪತ್ರೆಯಲ್ಲಿ ನೋಡುತ್ತಿದ್ದ ವೈದ್ಯರ ಹೆಸರು ಹೇಳಬಹುದ ಎಂದರೆ ಸಾಕ್ಷಿ ಬಿ.ಜಿ.ಎಸ್. ಗ್ಲೋಬಲ್ ಆಸ್ಪತ್ರೆಯ ವೈದ್ಯರು ರಾಘವೇಂದ್ರ ರವರೇ ಅಲ್ಲಿಯೂ ನೋಡುತ್ತಿದ್ದರು ಎಂದು ಉತ್ತರಿಸುತ್ತಾರೆ. ಆ ಸಂದರ್ಭದಲ್ಲಿ ನೀವು ಅಲ್ಲೆ ಇದ್ದಿರ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಪುನಿತ್ ಅವರು ತೀರಿಕೊಳ್ಳುವ 15 ದಿನ ಮುಂಚಿತವಾಗಿ ಕೆಂಗೇರಿಯ ಬಳಿ ಇರುವ ಆರ್ಯನ್ ಆಸ್ಪತ್ರೆಯಲ್ಲಿ ಡಾ.ಕೃಷ್ಣಮೂರ್ತಿ ಅವರು ಪುನಿತ್ ಅವರನ್ನು ನೋಡುತ್ತಿದ್ದರು, ನಿಮಗೆ ಯಾವುದೆ ವಿಚಾರ ಗೊತ್ತಿಲ್ಲದೆ ಇರುವುದರಿಂದ ಆಸ್ಪತ್ರೆಯ ಹೆಸರಾಗಲಿ ವೈದ್ಯರ ಹೆಸರಾಲಿ ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪುನಿತ್ ಅವರು

ತೀರಿಕೊಂಡಿರುವ ವಿಚಾರವನ್ನು ನಿಮಗೆ ಹೇಳಲು ಅಂತ್ಯಕ್ರಿಯೆ ಮಾಡಬಾರದು ಎಂದು ಕುಟುಂಬದಲ್ಲಿ ಹೇಳಿದ್ದರಿಂದ ನಿಮಗೆ ಫೋನ್ ಮಾಡಿ ವಿಚಾರ ತಿಳಿಸಿದ್ದು ಆಗ ನೀವು ಅಂತ್ಯಕ್ರಿಯೆಗೆ ಊರಿಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ನಾನು ಆಸ್ಪತ್ರೆಯಲ್ಲಿಯೇ ಇದ್ದೆ ಎಂದು ಉತ್ತರಿಸುತ್ತಾರೆ. 2016 ರಿಂದ 2019 ರ ವರೆಗೆ ಪುನಿತ್ ಅವರ ಚಿಕಿತ್ಸೆ ನಂತರ ಅವರು ತೀರಿಕೊಂಡಾಗ ಅಂತ್ಯಕ್ರಿಯೆ ಇತ್ಯಾದಿ ಎಲ್ಲಾ ಖರ್ಚುಗಳನ್ನು 1 ಮತ್ತು 2 ನೇ ಪ್ರತಿವಾದಿಯರು ಸಾಲ ಮಾಡಿ ಭರಿಸಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪುನಿತ್ ಅವರಿಗೆ ಚಿಕಿತ್ಸೆ ಕೊಡಿಸಿದ ಎಲ್ಲಾ ಆಸ್ಪತ್ರೆಗಳು ಖಾಸಗಿ ಆಸ್ಪತ್ರೆಗಳು ಎಂದರೆ ಸರಿ. ಪುನಿತ್ ಅವರನ್ನು ಆರೋಗ್ಯವಾಗಿ ಉಳಿಸಿಕೊಳ್ಳಲು ಪ್ರತಿವಾದಿಯರು ಎಲ್ಲಾ ರೀತಿಯ ಪ್ರಯತ್ನಗಳನ್ನೂ ಮಾಡಿ ಅವರ ಚಿಕಿತ್ಸೆಗಾಗಿ ರೂ.45 ಲಕ್ಷ ಸಾಲ ಮಾಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

4. ಪುನಿತ್ ಅವರು ತೀರಿಕೊಂಡ ನಂತರ ನೀವು ಪ್ರತಿವಾದಿಯರಲ್ಲಿ ಭಾಗ ಕೊಡಲು ಒತ್ತಾಯ ಮಾಡಿದ್ದೀರಿ ಎಂದರೆ ಸಾಕ್ಷಿ ಹೌದು ಕೇಳಿದ್ದೇನೆ ಎಂದು ಉತ್ತರಿಸುತ್ತಾರೆ. ಭಾಗದ ಬೇಡಿಕೆ ವಿಚಾರವಾಗಿ ಪಂಚಾಯಿತಿ ಆಯಿತು ಎಂದರೆ ಸರಿ. ಪಂಚಾಯಿತಿ ನನ್ನ ಗಂಡನ ಮನೆಯಲ್ಲಿ ಸೇರಿದ್ದೆವು ಅದರಲ್ಲಿ ನನ್ನ ತಂದೆ ಪುಟ್ಟಸ್ವಾಮಿ, ಸಿದ್ದೇಗೌಡರು, ತಿಮ್ಮೇಗೌಡರು, ಮರಿಸ್ವಾಮಿ, ನನ್ನ ಭಾವ ಸೇರಿದ್ದೆವು ಎಂದು ಉತ್ತರಿಸುತ್ತಾರೆ. ಆ ಪಂಚಾಯಿತಿಯಲ್ಲಿ ಕುಟುಂಬದ ಋಣಗಳು ಹಾಗು ಸಾಲಗಳ ಬಗ್ಗೆ ಪ್ರಸ್ತಾಪವಾಯಿತು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಆ ಪಂಚಾಯಿತಿಯಲ್ಲಿ ದಾವ ಐಟಂ ನಂ.6 ರ ಬಾಗಶಃ ಸ್ವತ್ತು 60*40 ಅಡಿ ಮಾರಾಟ ಮಾಡಿ ಸಾಲ ತೀರಿಸುವುದು ಎಂದು ಮಾತುಕತೆಯಾಯಿತು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಹಾಗೆಯೆ ಸಾಲ ತೀರುವಳಿಯಾದ ನಂತರ ವಾದಿ ಲೋಹಿತ್ ಗೌಡ ಅವರಿಗೂ ಭಾಗ ಕೊಡುವುದಾಗಿ ಪ್ರತಿವಾದಿಗಳು ಪಂಚಾಯಿತಿಯಲ್ಲಿ ಒಪ್ಪಿದ್ದರು ಎಂದರೆ ಸಾಕ್ಷಿ ಸುಳ್ಳು ಅವರು ಭಾಗ ಕೊಡುವುದಿಲ್ಲ ಎಂದು ಹೇಳಿದ್ದರು ಎಂದು ಉತ್ತರಿಸುತ್ತಾರೆ. ಆ ಪಂಚಾಯಿತಿಯಲ್ಲಿ ನೀವು ಸಾಲನ್ನು ನನ್ನನ್ನು ಕೇಳಿ ಮಾಡಿದ್ದೀರ ಅದಕ್ಕೂ ನನಗು ಸಂಬಂಧವಿಲ್ಲ, ನನ್ನ ಮಗುವಿನ ಭಾಗವನುನ ನನ್ನ ಹೆಸರಿಗೆ ಬರೆಯಿರಿ ಎಂದು ಡಿಮ್ಯಾಂಡ್ ಮಾಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪಂಚಾಯಿತಿಯಲ್ಲಿ ಧರ್ಮದ ತಳಹದಿಯ ಮೂಲ 4 ಭಾಗ ತೀರ್ಮಾನ ಮಾಡಿದ್ದರು ಆಗ ನೀವು 2 ಭಾಗವಾಗಬೇಕು ಎಂದು ಹೇಳಿ ನೀವು

ಡಿಮ್ಯಾಂಡ್ ಮಾಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಪಂಚಾಯಿತಿಯಲ್ಲಿ ಅವರು ಭಾಗ ಕೊಡುವುದಿಲ್ಲ ಎಂದು ಹೇಳಿ ಗಲಾಟೆಯೇ ಆಯಿತು ಆಗ ಅಲ್ಲಿದ್ದವರು ನೀವು ಕೇಸು ಹಾಕಿಕೊಂಡು ಬಂದು ಮುಂದುವರಿಯಿರಿ ಎಂದು ಹೇಳಿದರು ಎಂದು ಉತ್ತರಿಸುತ್ತಾರೆ. ಪಂಚಾಯಿತಿಯಲ್ಲಿ ನೀವು ಚಿಕ್ಕವಯಸ್ಸಿನವರಾಗಿರುವ ಕಾರಣ ಮರು ಮದುವೆಯಾಗುತ್ತೀರಿ, ನಿಮ್ಮ ಹೆಸರಿಗೆ ಆಸ್ತಿ ಬರೆದರೆ ನನ್ನ ಮೊಮ್ಮಗ ಲೋಹಿತ್ ಗೌಡನಿಗೆ ಅನ್ಯಾಯವಾಗುತ್ತದೆ ಎಂದು ನಿಮ್ಮ ಹೆಸರಿಗೆ ಬರೆಯಲು ಒಪ್ಪಲಿಲ್ಲ ಎಂದರೆ ಸಾಕ್ಷಿ ಈ ರೀತಿ ಮಾತುಕತೆಯೇ ಆಗಿಲ್ಲ ಎಂದು ಉತ್ತರಿಸುತ್ತಾರೆ. ಹಾಗೆ ಪಂಚಾಯಿತಿಯಲ್ಲಿ ಇದ್ದವರು ನಿಮ್ಮ ಮಗನ ಭಾಗದ ಆಸ್ತಿಯನ್ನು ನಿಮ್ಮ ಮಗ ಹಾಗು ಅವರ ಮಗ 1 ನೇ ಪ್ರತಿವಾದಿ ಹೆಸರಿನಲ್ಲಿ ಜಂಟಿಯಾಗಿ ಮಾಡಿಸಿ ಎಂದು ಹೇಳಿದ್ದರು ಎಂದರೆ ಸಾಕ್ಷಿ ಭಾಗವನ್ನೇ ಕೊಡುವುದಿಲ್ಲ ಎಂದು ಹೇಳಿದ್ದಾರೆ ಎಂದು ಉತ್ತರಿಸುತ್ತಾರೆ. ನೀವು ದಾವ ಆಸ್ತಿಗಳಲ್ಲಿ ಹಕ್ಕು ಕೇಳುವ ರೀತಿಯೇ 1 ಮತ್ತು 3 ನೇ ಪ್ರತಿವಾದಿಯವರನ್ನು ನೋಡಿಕೊಳ್ಳಲು ಹೊಣೆಗಾರಿಕೆಗೆ ಬಾಧ್ಯಸ್ಥರಾಗಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ವಿವಾಹವಾದ ಕಾಲದಿಂದಲೂ ನೀವು ನಿಮ್ಮ ಅತ್ತೆ, ಮಾವನವರನ್ನು ನೋಡಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ನಾನು ನೋಡಿಕೊಂಡಿರುತ್ತೇನೆ ನನ್ನ ಮದುವೆಯಾದ ನಂತರ ಯಾವುದೋ ಒಂದು ಕೋಣೆಯಲ್ಲಿ ಇದ್ದ ನನ್ನ ಮಾವನನ್ನು ನಾನು ಕರೆದುಕೊಂಡು ಬಂದು ನಮ್ಮ ಜೊತೆಯಲ್ಲಿ ಇರಿಸಿಕೊಂಡು ನೋಡಿಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ನಾನು ಮೇಲಿನ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2019 ರ ವರೆಗು ವಾದಿಯ ಶಾಲ ಶೂಲ್ಕವನ್ನು 2 ನೇ ಪ್ರತಿವಾದಿಯೇ ಕಟ್ಟಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ವಾದಿಯ ಶಾಲ ಶೂಲ್ಕವನ್ನು ಪಾವತಿ ಮಾಡಲು 2 ನೇ ಪ್ರತಿವಾದಿ ಬಂದಾಗಲೆಲ್ಲ ನನಗೆ ಭಾಗ ಕೊಡಲು ಶಾಲ ಶೂಲ್ಕ ಪಾವತಿ ಮಾಡಲು ಬಂದಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನನ್ನ ಮಗ ಲೋಹಿತ್ ಗೌಡನಿಗೆ ಎರಡು ಶಸ್ತ್ರ ಚಿಕಿತ್ಸೆಗಳಾಗಿವೆ. ಒಂದು ಜಿ.ಮಾದೇಗೌಡ ಆಸ್ಪತ್ರೆಯಲ್ಲಿ ಹಾಗು ಇನ್ನೊಂದು ಮಂಡ್ಯದ ಸ್ಪಂದನ ಆಸ್ಪತೆಯಲ್ಲಿ ಆಗಿರುತ್ತದೆ. ಆ ಸಮಯದಲ್ಲೂ ಆಸ್ಪತ್ರೆಯಲ್ಲಿ ಬಿಲ್ ಕಟ್ಟಲು 2 ನೇ ಪ್ರತಿವಾದಿ ಬಂದಿದ್ದರೂ ಆ ವೇಳೆಯೂ ನೀವು ಅವರ ಜೊತೆ ಜಗಳ ತೆಗೆದಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

5. ನನಗೆ ಮತ್ತು ನನ್ನ ಮಗನಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡಿದ್ದಾರೆ ಎಂದು ಹೇಳಿದ್ದೀರಿ ಆ ಬಗ್ಗೆ ದೂರು ಕೊಟ್ಟಿದ್ದೀರ ಎಂದರೆ ಸಾಕ್ಷಿ ಎಂದು ಉತ್ತರಿಸುತ್ತಾರೆ. ಈ ರೀತಿ ಹಿಂಸೆಗೆ ಒಳಪಟ್ಟಿರುವ ಯಾವುದಾದರು ವೈದ್ಯಕೀಯ ದಾಖಲಾತಿಗಳನ್ನು ಕೊಟ್ಟಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ತಿಂಗಳಿಗೆ 1 ಲಕ್ಷದ 20 ಸಾವಿರ ಬಾಡಿಗೆ ಬರುತ್ತದೆ ಎಂದು ತೋರಿಸಲು ದಾಖಲಾತಿ ಕೊಟ್ಟಿದ್ದೀರ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಅಂದಾಜು 8-10 ಅಂಗಡಿ, ಮಳಿಗೆಗಳು ಇರುತ್ತದೆ ಎಂದು ಉತ್ತರಿಸುತ್ತಾರೆ. ನಿಖರವಾಗಿ ನಿಮಗೇನು ಗೊತ್ತಿಲ್ಲ ಎಂದರೆ ಸಾಕ್ಷಿ 10 ಇದೆ ಎಂದು ಉತ್ತರಿಸುತ್ತಾರೆ. ಯಾರು ಯಾರಿಗೆ ಬಾಡಿಗೆ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರು ಎಷ್ಟು ಎಷ್ಟು ಬಾಡಿಗೆ ಕೊಡುತ್ತಾರೆ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಬಾಡಿಗೆದಾರರು ಯಾವ ರೀತಿ ಬಾಡಿಗೆ ಕೊಡುತ್ತಾರೆ ಎಂದರೆ ಸಾಕ್ಷಿ ನಗದು ಹಣ ಕೊಡುತ್ತಾರೆ ಎಂದು ಉತ್ತರಿಸುತ್ತಾರೆ. ಬಾಡಿಗೆದಾರರು ಎಷ್ಟು ಮುಂಗಡ ಹಣ ಕೊಟ್ಟಿದಾರೆ ಗೊತ್ತ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಬಾಡಿಗೆದಾರರು ಯಾವ ರೀತಿ ವ್ಯವಹಾರ ಮಾಡುತ್ತಾರೆ ಗೊತ್ತ ಎಂದರೆ ಸಾಕ್ಷಿ ಫರ್ನಿಚರ್ ಅಂಗಡಿ, ಹಾಲಿನ ಅಂಗಡಿ, ಮೆಡಿಕಲ್ ಅಂಗಡಿ, ಬಟ್ಟೆ ಅಂಗಡಿ, ಕಬ್ಬಿಣದ ಅಂಗಡಿ, ಕೃಷಿ ಸಲಕರಣೆ ಅಂಗಡಿ ಎಂದು ಉತ್ತರಿಸುತ್ತಾರೆ. ಬಾಡಿಗೆದಾರರನ್ನು ನೀವು ಸಂರ್ಪಕಿಸಿ ಮುಂಗಡ ಹಣ ಮತ್ತು ಬಾಡಿಗೆ ಹಣದ ಬಗ್ಗೆ ವಿಚಾರಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಮೇಲೆ ಹೇಳಿದ ವಿಚಾರ ಕೇಳಿ ತಿಳಿದುಕೊಳ್ಳಲು ತೊಂದರೆ ಇತ್ತ ಎಂದರೆ ಸಾಕ್ಷಿ ಕೇಳಿದರು ಹೇಳಬಾರದು ಎಂದು ಹೇಳಿರುತ್ತಾರೆ ಎಂದು ಉತ್ತರಿಸುತ್ತಾರೆ. ಬಾಡಿಗೆದಾರರು ರೂ.5000 ಮುಂಗಡ ಮತ್ತು ತಿಂಗಳಿಗೆ ರೂ.500-600 ಬಾಡಿಗೆ ಕೊಡುತ್ತಾರೆ, ಆ ಹಣ ಬಿಲ್ಡಿಂಗ್ ಮೇಂಟೆನೆನ್ಸ್ ಗೆ ಹೋಗುತ್ತದೆ, ನೀವು ಹೇಳುವ ರೀತಿ ರೂ.1 ಲಕ್ಷದ 20 ಸಾವಿರ ಬಾಡಿಗೆ ಹಣ ಬರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪುನಿತ್ ಅವರು ಸುಮಾರು 3-4 ವರ್ಷಗಳಿಂದ ಅನಾರೋಗ್ಯಕ್ಕೆ ತುತ್ತಾಗಿ ತೀರಿಕೊಂಡರು ಅವರ ಅನಾರೋಗ್ಯದ ಚಿಕಿತ್ಸೆ ವೆಚ್ಚ, ಆಸ್ಪತ್ರೆ, ಇತ್ಯಾದಿಗಳ ವಿವರಗಳನ್ನು ನೀವು ನಿಮ್ಮ ವಾದ ಪತ್ರದಲ್ಲಿ ಹೇಳಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಪುನಿತ್ ಅವರಿಗೆಯಾವ ಖಾಯಿಲೆ ಇತ್ತು ಎಂದು ನೀವು ನಿಮ್ಮ ಪ್ರಮಾಣ ಪತ್ರದಲ್ಲಾಗಲಿ ಅಥವ ನಿಮ್ಮ ವಾದ ಪತ್ರದಲ್ಲಾಗಲಿ ಹೇಳಿದ್ದೀರ ಎಂದರೆ ಸಾಕ್ಷಿ ಅನ್ಯಾರೋಗ್ಯದಿಂದ

ತೀರಿಕೊಂಡಿದ್ದಾರೆ ಎಂದು ಹೇಳಿದ್ದೇನೆ ಎಂದು ಉತ್ತರಿಸುತ್ತಾರೆ. ಪುನಿತ್ ಅವರು ಯಾವ ಖಾಯಿಲೆಯಿಂದ ಎಷ್ಟು ವರ್ಷ ನರಳಿ ತೀರಿಕೊಂಡರು ಎಂಬ ವಿಚಾರವನ್ನು ವಾದ ಪತ್ರದಲ್ಲಿ ಹೇಳಿದರೆ ಅವರ ಚಿಕಿತ್ಸಾ ವೆಚ್ಚದ ಹೊಣೆಗಾರಿಕೆಯನ್ನು ನೀವು ಭರಿಸಬೇಕಾಗುತ್ತದೆ ಎಂದು ಅದರ ಬಗ್ಗೆ ಯಾವುದೇ ವಿಚಾರಗಳನ್ನು ಹೇಳಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ವಾದ ಪತ್ರದಲ್ಲಿ ಪುನಿತ್ ಅವರಿಗೆ ಯಾವ ಖಾಯಿಲೆ ಇತ್ತು ಎಂದು ಬರೆಸಲು ತೊಂದರೆ ಏನಾದರು ಇತ್ತ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಪುನಿತ್ ಅವರ ಖಾಯಿಲೆಯ ಚಿಕಿತ್ಸೆಗಾಗಿ 2 ನೇ ಪ್ರತಿವಾದಿ ಅವರ ಸಂಬಳದ ಆಧಾರದ ಮೇಲೆ ವೈಯಕ್ತಿಕವಾಗಿ ಸಾಲ ಮಾಡಿ ಭರಿಸಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪುನಿತ್ ಅವರ ಚಿಕಿತ್ಸಾ ವೆಚ್ಚದ ಬಗ್ಗೆ ಬರೆಸಿ ಹಾಕಿದರೆ ಅದರ ಹೊಣೆಗಾರಿಕೆಯನ್ನು ನೀವು ಹೊರಬೇಕಾಗುತ್ತದೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಈ ದಾವೆಯಲ್ಲಿ ನೀವು ಅವಶ್ಯಕ ಪಕ್ಷಗಾರರನ್ನು ಸೇರಿಸಿರುವುದಿಲ್ಲ ಹಾಗಾಗಿ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಸಾಧ್ಯವಾದರೆ ದಾವ ಆಸ್ತಿಯಲ್ಲಿ ಹೆಚ್ಚಿನ ಭಾಗ ಹೊಡೆದುಕೊಳ್ಳಬೇಕೆಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಕುಟುಂಬದ ಋಣಗಳ ಜೊತೆಗೆ ದಾವ ಆಸ್ತಿಗಳನ್ನು ಈಗಲೂ 4 ನೇ 1 ಭಾಗ ಕೊಡಲು ಪ್ರತಿವಾದಿಯರು ತಯಾರಿದಾದರೆ ಎಂದರೆ ಸಾಕ್ಷಿ ಇಲ್ಲ ಅವರು ಕೊಡುವುದಿಲ್ಲ ಎಂದು ಹೇಳಿದ್ದಾರೆ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.